SRI B.B. SAYANAK.—I would request if the Hon'ble Minister through you, Sir, to direct the Municipality to stop the collection of water rates till the meters are rectified.

SRI H. C. SRIKANTAIAH.—That will be considered.

(*ii*) *re: Representation on Land Tribunals and other Committees Constituted by Government.*

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಭೂ ನ್ಯಾಯ ಮಂಡಲಿ ಮತ್ತು ಕನ್ಸಲ್ಟೇಟಿವ್ ಸಮಿತಿಗಳಲ್ಲಿ ವಿರೋಧಪಕ್ಷದವರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ನಾನು ೫೧೨ ಮೂಲಕ ಪ್ರಶ್ನೆ ಎತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ಎರಡು ಮೂರು ದಿವಸಗಳ ಹಿಂದೆ ಕಾಂಗ್ರೆಸ್ ಪಕ್ಷದ ಶಾಸಕರಿಗೆ ಪತ್ರ ಬರೆದಿದ್ದರು. ಆ ಪತ್ರವನ್ನು ನಮಗೂ ಕಳುಹಿಸಿಕೊಡಲಾಗಿತ್ತು. ನಮಗೆ ಕಳುಹಿಸಿದ್ದು ತಪ್ಪಿನಿಂದಾದುದು ಎಂದು ಆನಂತರ ಸಚಿವರು ತಿಳಿಸಿದರು ಮತ್ತೆ ಇವತ್ತು ನಮಗೊಂದು ಪತ್ರ ಬರೆದು ಮೂರು-ನಾಲ್ಕು ದಿವಸದೊಳಗಾಗಿ ಭೂ ನ್ಯಾಯ ಮಂಡಲಿಗಳಿಗೆ ಸದಸ್ಯರ ನ್ನಾಗಿ ಮಾಡಲು ನಮ್ಮ ಪಕ್ಷದ ವತಿಯಿಂದ ಯಾರು ಯಾರನ್ನು ಮಾಡಬೇಕೆನ್ನುವ ಬಗ್ಗೆ ಹೆಸರುಗಳನ್ನು ಕೊಡಿ ಎಂದು ಕೇಳಿದ್ದಾರೆ. ಹೆಸರುಗಳನ್ನು ಕೊಡುವಾಗ, ಅವರು ಭೂಸುಧಾರಣೆಯಲ್ಲಿ ನಂಬಿಕೆ ಯುಳ್ಳವರೂ, ಗೇಣಿದಾರ ಹಿತವನ್ನು ರಕ್ಷಣೆ ಮಾಡುವವರೂ ಆಗಿರುವಂತಹವರನ್ನು ಸೂಚಿಸಬೇಕೆಂದು ತಿಳಿಸಿದ್ದಾರೆ.

ಸ್ವಾಮಿ, ತಾವು ಈಗ ಏನೊಂದು ಮಾತು ಹೇಳಿದಿರಿ, ಗೈಡೆಲೈನ್ಸ್ ಏನು ಹೇಳಿದಿರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ವ್ಯಕ್ತಿಗಳನ್ನು ಸೂಚನೆ ಮಾಡುವ ಬಗ್ಗೆ ತಾವು ಏನು ಹೇಳಿದಿರಿ ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಲ್ಯಾಂಡ್‌ಲಾರ್ಡ್ಸ್ ಪರ ನಿಮ್ಮ ಪಕ್ಷದವರು ಯಾವ ರೀತಿ ಕಮಿಟ್ ಮಾಡಿಕೊಂಡಿದ್ದಾರೋ ಅದೇ ರೀತಿ ಈವಾಗಲೂ ಮಾಡಿದರೆ ಕಷ್ಟ. ಲ್ಯಾಂಡ್‌ಲಾರ್ಡ್ಸ್ ಪರವಾಗಿ ನಿಮ್ಮ ಪಕ್ಷದವರು ಕೆಲಸ ಮಾಡಿದ್ದಾರೆ.

೨-೦೦ ಪಿ.ಎಂ.

ಶ್ರೀ ಬಿ. ಭಾಸ್ಕರಶೆಟ್ಟಿ.—ಲ್ಯಾಂಡ್‌ಲಾರ್ಡ್ಸ್ ಪರವಾಗಿ ನಮ್ಮ ಪಕ್ಷದಿಂದ ಕೆಲಸ ಮಾಡಿದ್ದಾರೆ ಎಂದು ನಿಮಗೆ ಹೇಳುವುದಕ್ಕೆ ಅಧಿಕಾರವೇ ಇಲ್ಲ.

ಶ್ರೀ ಎಸ್ ಆರ್. ಬೊಮ್ಮಾಯಿ.—ಅದರ ಬ್ಗ್ ವಾದ ವಿವಾದ ಬೇಡ. ಹೋದ ಸಲ ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದ್ದರು. ಈವೊತ್ತಿನ ದಿವಸ ಈ ಬಗ್ಗೆ ಕೇಂದ್ರ ಸರ್ಕಾರದ ನಿಲುವೂ ಕೂಡ ಸ್ಪಷ್ಟವಾಗಿ ಇದೆ. ಎರಡು ವರ್ಷದೊಳಗೆ ಉಳುವವನೇ ಭೂಮಿಯ ಒಡೆಯನಾಗಬೇಕು ಅನ್ನುವ ಸಮಸ್ಯೆಯನ್ನು ಬಿಡಿಸಬೇಕು ಎಂದು ಹೇಳಿದ್ದಾರೆ. ನಾವೂ ಕೂಡ ನಮ್ಮ ಮಾನಿಫೆಸ್ಟೋ ನಲ್ಲಿ ಈ ರೀತಿ ಹೇಳಿದ್ದೇವೆ. ಅದರ ಬಗ್ಗೆ ಈವಾಗ ಇಲ್ಲಿ ಚರ್ಚೆ ಮಾಡುವುದು ಅನಾವಶ್ಯಕ. ತಾವು ಬರೆದ ಪತ್ರದ ಪ್ರಕಾರ ನಾವು ಹೆಸರುಗಳನ್ನು ಬರೆದು ಕಳುಹಿಸಿಕೊಡುತ್ತೇವೆ. ನನ್ನ ಪಕ್ಷದ ವಿಚಾರ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರ ವಿಚಾರ ಏನು ಇದೆ ಎಂದರೆ ವಿರೋಧ ಪಕ್ಷದ ಸದಸ್ಯರು ಯಾವ ಯಾವ ಕ್ಷೇತ್ರದಿಂದ ಆರಿಸಿ ಬಂದಿದ್ದಾರೆ ಆಯಾಯ ತಾಲ್ಲೂಕಿನಲ್ಲಿರುವ ಟ್ರಿಬ್ಯೂನಲ್‌ಗೆ ಸದಸ್ಯರ ನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಎಲ್ಲ ಪಕ್ಷದ ಸದಸ್ಯರನ್ನೂ ಸೂಚನೆ ಮಾಡುವುದಿಲ್ಲ. ವಿರೋಧ ಪಕ್ಷದಿಂದ ಒಬ್ಬ ಸದಸ್ಯರನ್ನು ಯಾರನ್ನು ಅಲ್ಲಲ್ಲಿಗೆ ಹಾಕಬೇಕು ಎನ್ನುವುದನ್ನು ಸೂಚನೆ ಮಾಡುತ್ತೇನೆಯೋ ಅಂಥಾವರನ್ನು ಹಾಕಿ. ಲ್ಯಾಂಡ್ ಟ್ರಿಬ್ಯೂನಲ್ಸ್‌ನಲ್ಲಿ ಲ್ಯಾಂಡ್‌ಲಾರ್ಡ್ಸ್ ಪರ ವಾಗಿ ಯಾರು ಕಮಿಟ್ ಮಾಡಿಕೊಂಡಿದ್ದಾರೋ ಅವರು ಬೇಡ. ಯಾರಿಗೆ ಇದರಲ್ಲಿ ಹೆಚ್ಚು ನಂಬಿಕೆ ಇದೆಯೋ, ಯಾರು ಇದರ ಬಗ್ಗೆ ಕಳಕಳಿಯಿಂದ ಕೆಲಸ ಮಾಡುತ್ತಾರೋ, ಒಳ್ಳೆಯ ಚಾರಿತ್ರ್ಯ ಉಳ್ಳಂಥಾವರು ಯಾರು ಇದ್ದಾರೋ ಅಂಥಾವರನ್ನು ಕಳುಹಿಸಿಕೊಡುತ್ತೇನೆ. ನಿಮ್ಮ ಗೈಡ್‌ಲೈನ್ಸ್ ಪ್ರಕಾರ ಅವರು ಕೆಲಸ ಮಾಡಬೇಕು. ಈ ವಿಚಾರವನ್ನು ತಾವು ಒಪ್ಪಿಕೊಂಡರೆ ೫-೪ ದಿವಸದೊಳಗೆ ತಮ್ಮ ಕಡೆಗೆ ಒಂದು ಪಟ್ಟಿಯನ್ನು ಬರೆದು ಕಳುಹಿಸಿಕೊಡುತ್ತೇನೆ. ಇಬ್ಬರ ಕಡೆಯೂ ಕೂಡ ರೈತ

ಮತ್ತು ಒಡೆಯ ಎಂಬ ಸಂಬಂಧವನ್ನು ತಪ್ಪಿಸಿ ಉಳುವವನೇ ಭೂಮಿಯ ಒಡೆಯ ಮಾಡುವುದಕ್ಕೆ ಏನು ಸಹಕಾರ ಬೇಕೋ ಆ ಸಹಕಾರವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಈ ಬಗ್ಗೆ ಹೆಚ್ಚು ವಾದ ವಿವಾದ ಬೇಡ. ದಯವಿಟ್ಟು ತಾವು ಇದನ್ನು ಒಪ್ಪಿಕೊಂಡು ಒಂದೊಂದು ಟ್ರಿಬ್ಯೂನಲ್‌ಗೆ ಒಂದೊಂದು ಹೆಸರನ್ನು ನೇಮಕ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಏನು ಇದೆ, ಯಾರನ್ನು ಈ ಟ್ರಿಬ್ಯೂನಲ್‌ಗೆ ಹಾಕಬೇಕು ಅನ್ನುವ ವಿಚಾರದಲ್ಲಿ ಈಗ ತಾನೇ ವಿರೋಧಪಕ್ಷದ ನಾಯಕರು ಒಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಸ್ಥೂಲವಾಗಿ ನಾವು ಸ್ವಾಗತ ಮಾಡಿದರೂ ಕೂಡ ಸಂಪೂರ್ಣವಾಗಿ ಆ ರೀತಿ ಮಾಡುವುದು ಕಷ್ಟ. ತಮ್ಮಲ್ಲಿ ಕೆಲವರಿಗೆ ಇದರ ಬಗ್ಗೆ ನಂಬಿಕೆ ಇರಬಹುದು. ಆದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಇದ್ದರೆ ಬಹಳ ಸಂತೋಷ ಮತ್ತೆ ತಾತ್ವಿಕವಾಗಿ ವಿರೋಧಪಕ್ಷದಲ್ಲಿರತಕ್ಕಂಥ ಸದಸ್ಯರನ್ನು ಹಾಕಬಾರದು ಅಂತ ನಮಗೆ ಏನೂ ಇಲ್ಲ. ಹಿಂದೆ ಕೂಡ ಅವರನ್ನು ಹಾಕಿದ್ದೇವೆ. ಆದರೆ ಹಾಗೆ ಹಾಕುವಾಗ ಯಾರಾದರೂ ಕೂಡ ಅದಕ್ಕೆ ಲ್ಯಾಂಡ್‌ಲಾರ್ಡ್ಸ್ ಪರ ಇದ್ದಾರೆಂದು ಕಂಡುಬಂದರೆ ಅವರನ್ನು ಖಂಡಿತ ಹಾಕುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏತಕ್ಕೆಂದರೆ ನಮ್ಮದು ಈ ಬಗ್ಗೆ ಕಮಿಟ್‌ಮೆಂಟ್ ಇದೆ.

ಒಬ್ಬ ಸದಸ್ಯರು.—ಏನು ಕಮಿಟ್‌ಮೆಂಟ್ ಸ್ವಾಮಿ, ನನಗೆ ಗೊತ್ತಾಗುವುದಿಲ್ಲ.

(ಸಭೆಯಲ್ಲಿ ಗೊಂದಲ)

ಶ್ರೀ ಡಿ. ದೇವರಾಜ ಅರಸ್.—ತಾವುಗಳು ಇಷ್ಟು ಬೇಜಾರು ಮಾಡಿಕೊಂಡರೆ ಬಹಳ ಕಷ್ಟ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದು ಏನೆಂದರೆ ತಮ್ಮ ಪಕ್ಷದಲ್ಲಿ ಲ್ಯಾಂಡ್ ಲಾರ್ಡ್ಸ್ ಪರವಾಗಿ ಯಾರಾದರೂ ಇದ್ದರೆ ಅಂಥಾವರನ್ನು ತೆಗೆಯಬೇಕು ಎಂದು ಹೇಳುತ್ತೇನೆ.

SRI MICHAEL FERNANDES.—It is on both sides.

SRI D. DEVARAJ URS.—It is not on both sides.

SRI P. RAMDEV.—If you see our Manifesto it will be clear.

SRI D. DEVARAJ URS.—Therefore, there is no compulsion to say that every M.L.A. should be put. By and large I accept that wherever Government feels that a particular gentleman is not in sympathy with the tenants such a person cannot find a place here. That is why what was once a compulsion under law, was subsequently amended. Previously it was mandatory and now we have changed it over to optional

ಇದು ಒಂದು ವಿಚಾರ ಸ್ವಾಮಿ, ಇಷ್ಟೊಂದು ಗದ್ದಲ ಮಾಡುವ ನಮ್ಮ ಸ್ನೇಹಿತರು ಇದ್ದಾರಲ್ಲಾ ಅವರಿಗೆ ನಾನು ಒಂದು ಮಾತು ಹೇಳುವುದೇನೆಂದರೆ ಕೇಂದ್ರ ಸರ್ಕಾರದವರಿಗೆ ಈ ಬಗ್ಗೆ ನಿಮ್ಮ ನಿಲವು ಏನು ಇದೆ ಅಂತ ಹೇಳಲಿ ಎಂದು ಹೇಳುತ್ತೇನೆ. ಅವರು ರೈಲ್ವೆ ಕಮಿಟಿಗೆ ನಾಮಕರಣ ಮಾಡುವಾಗ ಅಲ್ಲಿ ನಮ್ಮ ಸದಸ್ಯರನ್ನು ಹಾಕಿಲ್ಲಾ. ಒಂದು ಕಮಿಟಿಗೂ ನಮ್ಮ ಸದಸ್ಯರನ್ನು ಹಾಕಿಲ್ಲಾ.

ಶ್ರೀ ಸಿ. ಎಂ. ಇಬ್ರಾಹಿಂ.—ಹಾಗೆ ಹೇಳಬೇಡಿ. ಹಾಗೆ ಕಮಿಟಿಯಲ್ಲಿ ಇದ್ದಾರೆ. ಆಡ್ವೈಸರಿ ಕಮಿಟಿಯಲ್ಲಿ ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಒಟ್ಟಿನಲ್ಲಿ ನಾನು ಹೇಳುವುದು ಏನೆಂದರೆ ಕಮಿಟಿಗಳಲ್ಲಿ ಕಾಂಗ್ರೆಸ್ ಪಾರ್ಟಿಯಲ್ಲಿ ಇದ್ದವರನ್ನು ಹೆಚ್ಚಿಗೆ ತೆಗೆದಿದ್ದಾರೆ.

ಒಬ್ಬ ಸದಸ್ಯರು.—ನಿಮ್ಮನ್ನು ಹಾಕೋಣವೇ ?

ಶ್ರೀ ಡಿ. ದೇವರಾಜ ಅರಸ್.—ನಮ್ಮನ್ನು ಹಾಕಿಕೊಳ್ಳಿ. ಇದೇ ರೀತಿ ನ್ಯಾಯವನು ಅವರಿಗೂ ತಿಳಿಸಿ ಎಂದು ಹೇಳುತ್ತೇನೆ. ಏತಕ್ಕೆಂದರೆ ೩ ದಿವಸಕ್ಕೆ ಕಮಿಟಿಯಲ್ಲಿ ಇದ್ದವರೆ ಎಲ್ಲರನೂ ಕಿತ್ತು ಹಾಕಿದ ರಲ್ಲಾ ಎನ್ನುವುದನ್ನು ಅವರ ಗಮನಕ್ಕೆ ತರುತ್ತೇನೆ. ಅವರಿಗೆ ಬೇಡವಾದವರನ್ನು ಕಿತ್ತು ಹಾಕುವುದು. ಅವರ ಮ್ಯಾನಿಫೆಸ್ಟೋನಲ್ಲಿರುವುದನ್ನು ನಾನು ನೋಡಿದ್ದೇನೆ,

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಮುಖ್ಯ ಮಂತ್ರಿಗಳು ಕಮಿಟಿಗಳಲ್ಲಿ ಅವರ ಪಕ್ಷದವರು ಇಲ್ಲ ಅಂತ ಹೇಳಿದರು. ಅದಕ್ಕೆ ನಾನು ಹೇಳುವುದು ಏನೆಂದರೆ ಸೆಂಟ್ರಲ್ ಅಡ್ವೈಸರಿ ಕಮಿಟಿಯಲ್ಲಿ, ಹಾಜಿ ಕಮಿಟಿಯಲ್ಲಿ ೩ ಜನ ಕಾಂಗ್ರೆಸ್ ಸದಸ್ಯರು ಇದ್ದಾರೆ. ಮೊನ್ನೆ ಮಾಡಿರತಕ್ಕಂಥಾ ಕಮಿಟಿಗಳಲ್ಲೂ ಕೂಡ ಕಾಂಗ್ರೆಸ್ ಸದಸ್ಯರು ಇದ್ದಾರೆ. ಕಾಂಗ್ರೆಸ್, (ಐ) ಸದಸ್ಯರು ಮತ್ತು ಸ್ವರ್ಣಸಿಂಗ್ ಕಾಂಗ್ರೆಸ್ ಪಕ್ಷದ ಸದಸ್ಯರು ಇವರೆಲ್ಲಾ ಇದ್ದಾರೆ. ತಾವು ಈ ಬಗ್ಗೆ ಸಾಮ್ಮನೆ ಕ್ಲಾರಿಫಿಕೇಷನ್ ಮಾಡಬೇಡಿ.

ಶ್ರೀ ಡಿ. ದೇವರಾಜ ಅರಸ್.—ಹಾಜ್‌ಗೆ ಹೊರಗಡೆ ಮಕ್ಕಾಮದೀನ್‌ಗೆ ಕಳುಹಿಸುತ್ತೀರಲ್ಲಾ ಅದಕ್ಕೆ ಹಾಕಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಸೆಂಟ್ರಲ್ ಕಮಿಟಗಳಲ್ಲಿ ತಮ್ಮ ಪಕ್ಷದವರು ಯಾರನ್ನೂ ಹಾಕಿಲ್ಲಾ ಅಂತ ತಿಳಿಸಿದ್ದಾರೆ. ನಾನು ಈ ಬಗ್ಗೆ ಹೇಳುವುದು ಏನೆಂದರೆ ಮಂಕ್ಕಾಲು ಭಾಗ ಸೆಂಟ್ರಲ್ ಕಮಿಟಿಯಲ್ಲಿ ಒಬ್ಬೊಬ್ಬ ವಿರೋಧ ಪಕ್ಷದ ಸದಸ್ಯರನ್ನು ಹಾಕಿದ್ದಾರೆ. ಕನ್‌ಸಲ್ಟೇಟೀವ್ ಕಮಿಟಿಯಲ್ಲಿ ಇದ್ದಾರೆ. ರೈಲ್ವೆ ಕಮಿಟಿಯಲ್ಲೂ ಇದ್ದಾರೆ, ಎಲ್ಲಾ ಕಮಿಟಿಗಳಲ್ಲೂ ಇನ್ನಾರೆ.

ಶ್ರೀ ಡಿ. ದೇವರಾಜ ಅರಸ್.—ಸಾಮಾನ್ಯವಾಗಿ ಕನ್‌ಸಲ್ಟೇಟೀವ್ ಕಮಿಟಿಯಲ್ಲಿ ಅಪೋಸಿಷನ್ ಮೆಂಬರ್ಸ್ ಇದ್ದೇ ಇರುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ನನಗೆ ಗೊತ್ತಿರುವ ಹಾಗೆ ಸಾಮಾನ್ಯವಾಗಿ ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ಅವರು ತಮ್ಮ ಪಕ್ಷದ ಕಾರ್ಯಕರ್ತರನ್ನೇ ಅಧಿಕ ಸಂಖ್ಯೆಯಲ್ಲಿ ಹಾಕುತ್ತಾರೆ ಅನ್ನುವುದನ್ನು ನಾನೂ ಕೂಡ ಸಮರ್ಥನೆ ಮಾಡುತ್ತೇನೆ. ನಮ್ಮ ಸರ್ಕಾರ ಬಂದರೂ ಕೂಡ ಹಾಗೆಯೇ. ನಾನು ಹೇಳುವುದು ಏನೆಂದರೆ ೫ ಜನ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಏನು ಇರುತ್ತಾರೋ ಅದರಲ್ಲಿ ಒ ಬ್ಬೊಬ್ಬರನ್ನಾದರೂ ನಮ್ಮ ಕಡೆಯವರನ್ನು ಹಾಕಿ ಎಂದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ನಾನು ರೂಲ್ ಔಟ್ ಮಾಡಿಲ್ಲ. ಆ ವಿಷಯವನ್ನು ಪರಿಶೀಲಿಸೋಣ.

ಒಂದು ಟ್ರಿಬ್ಯುನಲ್‌ನಲ್ಲಿ ನಾಲ್ಕು ಜನ ಸದಸ್ಯರಿರುತ್ತಾರೆ. ಒಬ್ಬರು ಹರಿಜನ ಸದಸ್ಯರಿಸುತ್ತಾರೆ. ಇದರಲ್ಲಿ ನಮ್ಮ ಪಾರ್ಟಿಯವರೇ ಎಂದು ಅಲ್ಲ, ಬೇರೆ ಬೇರೆ ಪಕ್ಷಕ್ಕೆ ಸೇರಿದವರೂ ಸಹ ಇದ್ದಾರೆ. ಜನತಾ ಪಕ್ಷದವರೂ ಇದ್ದಾರೆ.

ಶ್ರೀ ಎಚ್.ಡಿ. ಚೌಡಯ್ಯ.—ಮಂಡ್ಯ ಜಿಲ್ಲೆಯಲ್ಲಿ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಒಂದು ತಾಲ್ಲೂಕ್‌ನಲ್ಲಿ ಇಲ್ಲದಿರಬಹುದು ಆದರೆ ಎಲ್ಲ ಕಡೆ ಅದೇ ರೀತಿ ಇದೆ ಎಂದು ಹೇಳುವುದು ಸರಿಯಲ್ಲ. ಬೇಕಾದರೆ ತಮಗೆ ಒಂದು ಪಟ್ಟಿ ಮಾಡಿ ತೋರಿ ಸುತ್ತೇನೆ. ಹಾಗೆ ನೋಡುವುದಾದರೆ ಯಾರು ಯಾವಾಗ ಯಾವ ಪಕ್ಷದಲ್ಲಿರುತ್ತಾರೆಂಬುದೇ ಗೊತ್ತಾ ಗುವುದಿಲ್ಲ. ಇದ್ದಕ್ಕಿದ್ದಂತೆ ಮಾವ ಭಾವ ಎಂದು ಒಂದು ಕಡೆ ಸೇರಿ ಬಿಡುತ್ತಾರೆ.

ಶ್ರೀ ಜೆ. ಎಚ್. ಪಟೇಲ್.—ತಮ್ಮ ಹಿಂದೆ ಇರುವವರ ಪೈಕಿ ಯಾರು ಯಾರು ಎಲ್ಲೆಲ್ಲಿ ಈ ಮೊದಲು ಇದ್ದರೆಂಬುದು ತಮಗೆ ಗೊತ್ತಿರಬಹುದು.

ಶ್ರೀ ಡಿ. ದೇವರಾಜ ಅರಸ್.—ಒಂದು ಕಾಲಕ್ಕೆ ಮಾನ್ಯ ಬಂಗಾರಪ್ಪನವರು ತಮ್ಮ ಜೊತೆಗೆ ಇದ್ದವರು. ಆದರೆ ತಮ್ಮ ಪಕ್ಷವನ್ನು ಅವರು ಬಿಟ್ಟು ಬಹಳ ದಿವಸಗಳಾದವು. ತಾವೂ ಸಹ ಮೊದಲು ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದ್ದಿರಿ. ಈಗ ಜನತಾ ಪಕ್ಷಕೆ ಸೇರಿದ್ದೀರಿ. ಅದೇ ರೀತಿ ಇವರು ಸಹ ನಮ್ಮ ಕಡೆ ಬಂದು ಸೇರಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಾವೆಲ್ಲರೂ ಕಾಂಗ್ರೆಸ್ ಸದಸ್ಯರೇ ಆಗಿದ್ದೆವು.

ಶ್ರೀ ಡಿ. ದೇವರಾಜ ಅರಸ್.—ಈಗ ಬೇರೆ ಬೇರೆ ಕಡೆ ಹೋಗಿದ್ದಾರೆ. ನಮ್ಮೆಲ್ಲರ ರಾಜಕೀಯ ಕುಲವನ್ನು ಪುಡುಕಿದರೆ ಎಲ್ಲರೂ ಕಾಂಗ್ರೆಸ್‌ಗೆ ಬರುತ್ತಾರೆಂದು ಆಯಿತು. ಆದರೆ ಮಾನ್ಯ ಇಬ್ರಾಹಿಂ ಅವರು ಕಾಂಗ್ರೆಸಿಗರಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಂ ನಾನು ೧೯೬೨ರಲ್ಲಿ ಕಾಂಗ್ರೆಸ್ ಸೇರಿದ್ದೆ.

SRI D. DEVARAJ URS.—It is a good news to me. That means one day he can also come to our fold.

Sir, they want me to lead. Let all of them come away and I will lead all of them.

That is the position. We will certainly keep in view what the hon. the Leader of the Opposition has suggested. So far as Recruitment Committees are concerned, the question of party does not come in there. Noboby is going to put this party man or that party man. The Recruitment Committee members have to see to the policy of the Government, particularly reservation of SC/ST., and they should take care to protect the interest of the minorities. That is the idea with which we constitute these Recruitment Committees, and we made it a point to see that there was a SC/ST members and a minority community member. These two, is a must, So far as the other two members are concerned, they may be anybody, who generally have the sympathy towards backward classes whose interest is to be a safeguarded.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಈಗ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಹೇಳಿದ್ದರಲ್ಲಿ ನನಗೆ ಮೂಲಭೂತವಾಗಿ ಭಿನ್ನಾಭಿಪ್ರಾಯ ಕಾಣುವುದಿಲ್ಲ. ಆದರೆ ಈ ರಾಜ್ಯದಲ್ಲಿ ರಾಷ್ಟ್ರಪತಿಯವರ ಆಡಳಿತವಿದ್ದಾಗ ನಮ್ಮ ರಾಜ್ಯಪಾಲರು ಖಾಸಗೀ ಸದಸ್ಯರು ಈ ಟ್ರಿಬ್ಯುನಲಿಗಳಲ್ಲಿರಬಾರದೆಂದು ಇದ್ದವರನ್ನು ತೆಗೆದುಹಾಕಿದರು. ಇದನ್ನು ವಿರೋಧ ಪಕ್ಷದವರ ಕಡೆಯವರೂ ಸಹ ಕೆಲವರು ಒಪ್ಪಲಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಇದನ್ನು ಒಪ್ಪಿಕೊಳ್ಳಲಿಲ್ಲ. ಈ ಬಗ್ಗೆ ಅವರು ಬಹಿರಂಗವಾಗಿ ಹೇಳಿಕೆ ಕೊಟ್ಟರು. ಆದರೆ ಕೆಲವರು ಈ ಒಂದು ತತ್ವವನ್ನು ಒಪ್ಪಿಕೊಂಡರು. ಇದು ಸರಿ ಎಂದು ಒಪ್ಪಿಕೊಂಡವರನ್ನು ಮತ್ತೆ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಿದರೆ ಅವರ ಕಮಿಟೆಡ್ ಬಗ್ಗೆ ಅನುಮಾನ ಬರುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಅಂಶವನ್ನು ಸಹ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕಕ್ಕಿಲ್ಲಾಯ ಅವರು ಒಂದೆರಡು ವಿಚಾರಗಳನ್ನು ಹೇಳಿದ್ದಾರೆ. ಈ ಬಗ್ಗೆ ಹೇಳಬೇಕೆಂದರೆ, ನಮ್ಮ ಪಕ್ಷದ ನೀತಿಯೂ ಸಹ ಈ ಭೂನ್ಯಾಯ ಮಂಡಲಿಗಳಲ್ಲಿ ಖಾಸಗೀ ಸದಸ್ಯರು ಇರಬೇಕೆಂಬುದೇ ಆಗಿದೆ. ಇದನ್ನು ನಾವು ಈ ಮಸೂದೆಯನ್ನು ಪಾಸ್ ಮಾಡುವಾಗಲೇ ಒಪ್ಪಿಕೊಂಡಿದ್ದೇವೆ. ಕೆಲವರು ಇದನ್ನು ವಿರೋಧ ಮಾಡಿದ್ದರೆ. ಆದಕೆ ನಮ್ಮ ಸಿಂಪತಿ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಭೂಮಾಲೀಕರ ಬಗ್ಗೆ ಯಾರಿಗೆ ಸಿಂಪತಿ ಇರುತ್ತದೋ ಅಂತಹವರು ಮಾತ್ರ ಅದರಲ್ಲಿರಬಾರದು. ಇಂತಹವರು ಆ ಕಡೆಯೂ ಇರಬಹುದು, ಈ ಕಡೆಯೂ ಇರಬಹುದು. ಇಂತಹ ಕೆಲವರನ್ನು ಬಿಟ್ಟರೆ ಎಲ್ಲರೂ ರೈತರ ಪರವಾಗಿಯೇ ಇದ್ದಾರೆ. ನಾವೂ ಸಹ ಈ ಟೆನೆನ್ಸಿ ಆಕ್ಟನ ತತ್ವಕ್ಕೆ ಒಪ್ಪಿಕೊಂಡಿದ್ದೇವೆ. ಆದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಟೆನೆಂಟ್ಸಿಗೆ ವಿರುದ್ಧವಾಗಿರುವವರು ಯಾವ ಪಕ್ಷದಲ್ಲೇ ಇರಲಿ, ಅವರು ಈ ಟ್ರಿಬ್ಯುನಲಿ

ನಲ್ಲಬಾರದೆಂದು ಹೇಳುತ್ತೇನೆ. ಮಾನ್ಯ ಕಕ್ಕಿಲ್ಲಾಯ ಅವರ ಪಕ್ಷದಲ್ಲಿದ್ದರೆ, ಅಂತಹವರೂ ಸಹ ಅಲ್ಲಿರ ಬಾರದು Even among the Communists there are reactionaries ; ಅಂತಹ ವರನ್ನು ಸದಸ್ಯರನ್ನಾಗಿ ಮಾಡಬಾರದೆಂದು ಹೇಳುತ್ತೇನೆ. ತಾವು ಹೇಳಿದ ಪ್ರಕಾರ ನಾನು ಹೆಸರುಗಳನ್ನು ಇನ್ನು ೩-೪ ದಿವಸಗಳಲ್ಲಿ ಬರೆದು ತಮಗೆ ಕಳುಹಿಸುತ್ತೇನೆ.

ಇನ್ನೂ ರೆಕ್ಕೊಟಿಯೆಂಟ ಕಮಿಟಿಗಳಿಗೆ ಸದಸ್ಯರನ್ನು ನೇಮಕ ಮಾಡುವಾಗ ಈ ಮೊದಲು ತಾವು ವಿರೋಧಪಕ್ಷದವರೊಡನೆ ಮಾತನಾಡಿ ಅವರ ಸಲಹೆ ಪಡೆದು ನಂತರ ನೇಮಕ ಮಾಡುತ್ತಿದ್ದಂತೆ ಈ ಸಲವೂ ಸಹ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಕಮಿಟಿಗಳಲ್ಲಿ ಹರಿಜನರು ಮತ್ತು ಮೈನಾರಿಟೀಸ್ ಗುಂಪಿಗೆ ಸೇರಿದವರು ಇರಬೇಕಾಗುತ್ತದೆಂದು ತಾವು ಹೇಳಿದಿರಿ. ಇಂತಹವರು ನಮ್ಮ ಪಕ್ಷದಲ್ಲಿಯೂ ಸಹ ಇದ್ದಾರೆ. ತಾವು ಕೇಳಿದರೆ ಅಂತಹವರ ಹೆಸರುಗಳನ್ನು ತಮಗೆ ಕೊಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈ ಸಭೆಯಲ್ಲಿ ಆಡಳಿತ ಪಕ್ಷದ ಕಡೆ ೧೫೦ ಜನ ಸದಸ್ಯರಿದ್ದರೆ ನಮ್ಮ ಕಡೆ ೭೩ ಜನ ಸದಸ್ಯರಿದ್ದಾರೆ. ಆದಕ್ಕಾರಣ ಕಮಿಟಿಗಳಿಗೆ ಸದಸ್ಯರನ್ನು ನೇಮಕ ಮಾಡುವಾಗ ಈ ಕಡೆಯ ಸದಸ್ಯರಿಗೂ ಸಹ ಪ್ರಪೋಷನೇಟ್ ಆಗಿ ಸರಿಯಾದಂತಹ ಮಾನ್ಯತೆ ಕೊಡಬೇಕೆಂದು ಹೇಳುತ್ತೇನೆ ಆ ಕಡೆಯವರೆಲ್ಲಾ ಕಮಿಟೆಡ್ ಆಗಿದ್ದಾರೆಂದು ಅರ್ಥ ಬರುವಂತೆ ತಾವು ಹೇಳಿದಿರಿ. ಆದರೆ ಮಾನ್ಯ ರೆವಿನ್ಯೂ ಮಂತ್ರಿಗಳು ಮೊನ್ನೆ ' those who are congressmen ; those who are committed to these things' ಎಂದು ಹೇಳಿರುವುದನ್ನು ನೋಡಿದರೆ, ನಿಮ್ಮಲ್ಲಿಯೂ ಕಮಿಟೆಡ್ ಇಲ್ಲಿದಿರುವ ಜನರಿದ್ದಾರೆಂದು ಅರ್ಥವಾಯಿತು. ಅಂತಹವರು ಈ ಕಡೆಯೂ ಇದ್ದಾರೆ. ನಾನು ಒಪ್ಪುತ್ತೇನೆ. ಆದ್ದರಿಂದ ನಾವು ಹೆಸರುಗಳನ್ನು ಕಳುಹಿಸಿದಾಗ, ತಮಗೆ ಅನುಮಾನ ಬಂದರೆ ಸಿ.ಐ.ಡಿ. ಗಳ ಮುಖಾಂತರ ಬೇಕಾದರೆ ತನಿಖೆ ಮಾಡಿಸಿ ನಂತರ ತೆಗೆದುಕೊಳ್ಳಿ. ಯಾರು ಕಮಿಟೆಡ್ ಗುಂಪಿಗೆ ಬರುತ್ತಾರೋ ಅಂತಹವರನ್ನೇ ಈ ಕಮಿಟಿಗಳಲ್ಲಿ ಹಾಕಿ. ಒಟ್ಟಿನಲ್ಲಿ ನಮಗೂ ಸಹ ಸಮಾನವಾದಂಥ ಅಂದರೆ ರೆಷಿಯೋ ಪ್ರಕಾರ ಪ್ರಾತಿನಿಧ್ಯ ಕೊಡಬೇಕೆಂಬುದೇ ನಮ್ಮ ಇಚ್ಛೆಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಪ್ರಪೊರ್ಷನೇಟ್ ಆಗಿ ಡಿವೈಡ್ ಮಾಡುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. My friend Sri Bommay will accept that whichever party comes to power, that party has to pursue its policy in pursuance of its manifesto. The people who are helpful to pursue the policy will have to be put. While so doing, I am not going to ignore the opposition members. We will also consider to see to it. To say that proportionately "we are so many and they are so many" and the ratio should be fixed, it is not a property to be divided. So far as commitment is concerned. it is not merely a question of this party or that party.

Generally whoever is having the full faith in the cause of tenants will be put. There are thousands of instances where the Taluk office does not have records at all and even if it is having, it is having false records. A tenant will be cultivating the land for over 20 years or 50 years but his name is not entered in the records. These record have been changed at the instance of the landlord over a number of years eversince we talked of land reforms. Eversince we conceived the idea of introducing land reforms so many permutations and combinations have taken place in respect of lands. Now atleast we have found out a remedy by way of constituting these Tribunals consisting of non-officials. Ours is the only State in the whole of the country which has implemented the land reforms to this extent;

nowhere it has happened. I can challenge anybody by facts and figures, I am not making any bombastic statement. We have put the non-officials with a view to see or to identifiy the tenant whether his name is found or not in the register. If you go to a village where the land is situated, normally the people living there are bound to speak out the truth as to who is the man that is cultivating the land. I have come across certain instances where the names of false tenants have been sponsored and the names of real tenants have been left out probably with the connivance of some of the Tribunal members and the landlord. Those things have also happend. That is why we are seriously thinking of remedying these defects. The other day the Leader of the Opposition suggested to government to review, if not a direct appeal. I am happy he has made that suggestion. We will certainly take up these things when the amendments to the land reforms are thougt of. The suggestions of other hon'ble members will be taken note of.

Notice of an adjournment motion

re : Demolition of a harijan house in Yelhanka near Bangalore

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ತಾವು ಲ್ಯಾಂಡ್ ರೀಫಾರಂಸ್ ಆಕ್ಟ್ ಬಗ್ಗೆ ಹೇಳಿದಿರಿ. ಇದು ಬರೀ ಸರಸ್ವತೀ ಪ್ರಸನ್ನ ಆಗಿದೆಯೇ ಹೊರತು ಲಕ್ಷ್ಮೀ ಪ್ರಸನ್ನ ಆಗಿಲ್ಲ, ತಾವು ಓನರ್ಸ್‌ಗೆ ಹಣ ಕೊಡಬೇಕಾದರೆ ೩೦ ವರ್ಷ ಎಂದು ನಿಗದಿ ಮಾಡಿದ್ದೀರಿ. ತಾವು ಈ ಲ್ಯಾಂಡ್ ರೀಫಾರ್ಸ್‌ನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಸುಮಾರು ೨೫-೩೦ ಕೋಟಿ ರೂಪಾಯಿ ಖರ್ಚಾಗಬಹುದು. ಆದ್ದರಿಂದ ಇದನ್ನು ಸಂಪೂರ್ಣವಾಗಿ ಜಾರಿಗೆ ತರುವ ಜವಾಬ್ದಾರಿಯನ್ನು ತಾವೇ ತೆಗೆದುಕೊಂಡು ಇವತ್ತೇ ಏತಕ್ಕೆ ಈ ಭೂ ಮಾಲೀಕರಿಗೆ ಹಣವನ್ನು ಕೊಡಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನಾವು ಕೇಳಿದ್ದೇವೆ. ಪ್ರತಿಯೊಂದು ಟ್ರಿಬ್ಯುನಲ್‌ನಲ್ಲೂ ನಾವು ಪ್ರೊಪೋರ್ಷನೇಟ್ ಕೇಳುವುದಕ್ಕೆ ಹೋಗಿಲ್ಲ. ಎಲ್ಲೆಲ್ಲಿ ನಾವು ಈ ಕಮಿಟೆಡ್ ಪೆಸರುಗಳನ್ನು ಕೊಟ್ಟಿದ್ದೇವೆ ಅದನ್ನು ಕೊಡುವುದಕ್ಕೆ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಹಿಂದೆ ರಿಕ್ರೂಟ್‌ಮೆಂಟ್ ಕಮಿಟಿ ಮಾಡುವಾಗ ಏನೇನು ರೀತಿನೀತಿಗಳನ್ನು ಅನುಸರಿಸಿದ್ದರೋ ಅದೇ ರೀತಿನೀತಿಗಳನ್ನು ಅನುಸರಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಇದನ್ನೂ ನಾನು ಸ್ವಾಗತ ಮಾಡುತ್ತೇನೆ. ಆದರೆ ಯಾರ್ಯಾರು ಸದಸ್ಯರು ಸರಿಯಾಗಿ ನಡೆದುಕೊಳ್ಳುವುದಿಲ್ಲ ಎಂದು ದೂರು ಬರುತ್ತದೆ ಅಂಥವರನ್ನು ಅಲ್ಲಿಂದ ತೆಗೆದುಹಾಕುವುದಕ್ಕೆ ಸರ್ಕಾರ ಸಿದ್ಧವಿರಬೇಕು.

ಶ್ರೀ ವೈ, ರಾಮಕೃಷ್ಣ.—ಸ್ವಾಮಿ, ನಾನು ಒಂದು ನಿಲುವಳಿಸೂಚನೆ ಕಳುಹಿಸಿದ್ದೆ ತಾವು ಅದನ್ನು ತೆಗೆದುಕೊಳ್ಳಬೇಕು.

Fall in price of jaggery and ragi

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸ್ವಾಮಿ, ನಾನು ಒಂದು ವಾರದ ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ಕಳಿಸಿದ್ದೆ. ಇವತ್ತು ಬೆಲ್ಲ ಮತ್ತು ರಾಗಿ ರೇಟ್ ಕಡಿಮೆಯಾಗಿದೆ. ಕಬ್ಬನ್ನು ಬೆಳೆಯುವುದೇ ಒಂದು ಶಾಪವಾಗಿ ಈ ಶಾಪಕ್ಕೆ ಲಕ್ಷಾಂತರ ಜನ ರೈತರು ಸಿಕ್ಕಿದ್ದಾರೆ. ಈಗ ರೈತರ ಸಹಕಾರಕ್ಕೆ ಸರ್ಕಾರ ಬರದೇ ಹೋದರೆ ಈ ಲಕ್ಷಾಂತರ ರೈತರೂ ಹಾಳಾಗುತ್ತಾರೆ, ಈಗ ಅವರು ಸರ್ಕಾರಕ್ಕೆ ಹಣವನ್ನು ಕಟ್ಟಬೇಕಾಗಿದೆ.